## ನಿಮ್ಮೊಡನೆ

# ಹರೆಯದ ಮಕ್ಕಳ ಸಾವಿಗೆ ವ್ಯವಸ್ಥೆಯೇ ಕಾರಣ

**ಹದಿಹರೆಯದ ಮಕ್ಕಳು ಹೊಂಗನಸುಗಳನ್ನು ಕಾಣುತ್ತಿಲ್ಲ. ರೋಷ ಬೆಳೆಸಿಕೊಂಡು ಮಾರಣಾಂತಿಕ ಹಲ್ಲೆ ಮಾಡುತ್ತಾರೆ. ಜೀವನದಲ್ಲಿ ಜಿಗುಪ್ಸೆ ಹೊಂದಿ, ಬದುಕು ಕೊನೆಗೊಳಿಸುತ್ತಿದ್ದಾರೆ. ಈ ಯುವಮನಗಳನ್ನು ಜೀವನ್ಮುಖಿಯಾಗಿಸುವ ಗುರುತರ ಜವಾಬ್ದಾರಿ ಶಿಕ್ಷಣ ಸಂಸ್ಥೆ ಮತ್ತು ಕುಟುಂಬವೆಂಬ ಸಂಸ್ಥೆಗಳ ಮೇಲಿದೆ.**

ಬಳ್ಳಾರಿ ಜಿಲ್ಲೆಯ ಖಾಸಗಿ ಶಾಲೆಯ ವಸತಿಗೃಹದಲ್ಲಿ ಮಕ್ಕಳ ಜಗಳ ಕೊಲೆಯಲ್ಲಿ ಅಂತ್ಯಕಂಡ ವರದಿಯು ಬೆಚ್ಚಿಬೀಳಿಸುವಂತಿದೆ. ಮಲಗಿದ್ದ ಸಹಪಾಠಿಗಳ ಮೇಲೆ ಹದಿನೈದು ವರ್ಷ ವಯಸ್ಸಿನ ವಿದ್ಯಾರ್ಥಿ ಹಲ್ಲೆ ಮಾಡಿ ಪರಾರಿಯಾಗಿದ್ದ. ಪೊಲೀಸರು ಕಾನೂನಿನ ಸಂಘರ್ಷಕ್ಕೆ ಒಳಗಾಗಿದ್ದ ಬಾಲಕನನ್ನು ಆಪ್ತಸಮಾಲೋಚಕರು ಪ್ರಶ್ನಿಸಿದಾಗ ಆತಂಕಕಾರಿ ವಿಷಯಗಳು ಹೊರಬಂದಿವೆ. ವಸತಿಗೃಹದಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆ (ಒಬ್ಬ ವಿದ್ಯಾರ್ಥಿನಿಯನ್ನೂ ಸೇರಿದಂತೆ) 9 ಜನ ಮಾತ್ರ. ಜೊತೆಗಿರುವ ಮಕ್ಕಳು ಸದಾ ಈ ಹುಡುಗನನ್ನು ಛೇಡಿಸುತ್ತಿದ್ದರು. ಹೀಯಾಳಿಸುತ್ತಿದ್ದರು. ಆಟಕ್ಕೆ ಸೇರಿಸಿಕೊಳ್ಳುತ್ತಿರಲಿಲ್ಲ. ಗುಂಪಿನಿಂದಾಚೆ ಇರಿಸುತ್ತಿದ್ದರು.

ಹದಿವಯಸ್ಸಿನ ಮಕ್ಕಳು ಮನೆಯಿಂದಾಚೆ ಯಾರೂ ಇಲ್ಲದ ಪರಿಸರದಲ್ಲಿ ಇಂಥ ಅವಮಾನವನ್ನು ಎದುರಿಸುವುದು ಆ ಮಗುವಿನಲ್ಲಿ ಹಲ್ಲೆ ಮಾಡುವಷ್ಟು ರೋಷ ಹುಟ್ಟಿಸಿತೆ ಅಥವಾ ಬೇರೆ ಕಾರಣಗಳೂ ಇವೆಯೇ ಎಂಬ ತನಿಖೆ ಮುಂದುವರಿಯುತ್ತಿದೆ. ಆದರೆ ಅನುಮತಿ ಇಲ್ಲದೆಯೇ ವಸತಿ ವ್ಯವಸ್ಥೆ ಮಾಡಿರುವ ಶಾಲಾ ಆಡಳಿತ ಮಂಡಳಿಯೂ, ಯಾವುದೇ ಅನುಮತಿ ಇರದ ವಸತಿ ವ್ಯವಸ್ಥೆಗೆ ಬಿಟ್ಟಿರುವ ಪಾಲಕರ ನಿರ್ಲಕ್ಷ್ಯವೂ ಇಲ್ಲಿ ಚರ್ಚೆಗೆ ಬರಬೇಕಾದ ವಿಷಯವಾಗಿದೆ.

ಬಳ್ಳಾರಿಯ ಇನ್ನೊಂದು ಘಟನೆಯೂ ಮೈ ನಡುಗಿಸುವಂತಿದೆ. ಕಾಲೇಜು ವಿದ್ಯಾರ್ಥಿಯೊಬ್ಬ ಉಪನ್ಯಾಸಕರು ಬುದ್ಧಿ ಹೇಳಿದರೆಂದು ತನ್ನ ಬದುಕನ್ನೇ ಕೊನೆಗಾಣಿಸಿದ್ದಾನೆ. ಈ ಎರಡೂ ಘಟನೆಗಳಲ್ಲಿ ಮಕ್ಕಳು ಛೇಡಿಸುವುದನ್ನು ಅಥವಾ ಬೈದು ಬುದ್ಧಿ ಹೇಳಿದ್ದನ್ನು ಸಹಿಸಿಕೊಳ್ಳದ ಸ್ಥಿತಿಗೆ ಬಂದಿದ್ದಾರೆ. ಒಬ್ಬನಲ್ಲಿ ರೋಷ ಉಕ್ಕಿಸಿದರೆ, ಇನ್ನೊಬ್ಬನಲ್ಲಿ ಜಿಗುಪ್ಸೆ ಮೂಡಿಸಿದೆ. ಇಬ್ಬರೂ ಬದುಕುವ ಹಕ್ಕನ್ನು ಕಸಿದುಕೊಂಡವರೇ.

ಮಕ್ಕಳ ಮಾನಸಿಕ ಪ್ರಪಂಚದಲ್ಲಿ ಆಗುತ್ತಿರುವುದಾದರೂ ಏನು? ಇದನ್ನು ಗಮನಿಸುವ ವ್ಯವಧಾನ ಹೆತ್ತವರಿಗೂ, ಶಿಕ್ಷಕರಿಗೂ ಇಲ್ಲವಾಗಿದೆ. ಮಕ್ಕಳ ಮನೋವ್ಯಾಪಾರವನ್ನು ಗುರುತಿಸದಷ್ಟು ಸಂವೇದನಾರಹಿತರಾಗಿದ್ದೇವೆ. ಮಕ್ಕಳು ಮೊಬೈಲ್ ಫೋನಿನ ಗೀಳಿಗೆ ಒಳಗಾಗಿದ್ದಾರೆ. ಸ್ವಯಂಕೇಂದ್ರಿತ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಮಾನವ ಸಹಜ ಗುಣಗಳಾದ ಹಾಸ್ಯವನ್ನು ಅಪಹಾಸ್ಯಕ್ಕೂ, ಛೇಡಿಸುವುದನ್ನು ಹೀಗಳೆಯುವಿಕೆಗೂ, ಸಮರ್ಥಿಸಿಕೊಳ್ಳುವ ಗುಣವನ್ನು ಆಕ್ರಮಣಕಾರಿ ಗುಣವಾಗಿಯೂ ಬದಲಿಸಿಕೊಂಡಿದ್ದಾರೆ ಎಂದು ದೂಷಿಸುವುದು ಸುಲಭ. ಆದರೆ ಮಕ್ಕಳ ಮನೋಲೋಕದಲ್ಲಿ ಇಷ್ಟೆಲ್ಲ ಬದಲಾವಣೆಗಳಾಗಬೇಕಾದರೆ ಹೆತ್ತವರೇನು ಮಾಡುತ್ತಿದ್ದರು? ಶಿಕ್ಷಕರು ಏನು ಮಾಡುತ್ತಿದ್ದರು? ಎಂಬ ಪ್ರಶ್ನೆಯೂ ಮೂಡುತ್ತದೆ.

ನಮ್ಮ ಶಿಕ್ಷಣ ಸಂಸ್ಥೆಗಳ ಜಾಹೀರಾತನ್ನು ಒಮ್ಮೆ ಗಮನಿಸೋಣ. ಅವರು ಶಿಕ್ಷಿತ ಗುಲಾಮಗಿರಿಗೆ ಸಜ್ಜುಗೊಳಿಸುವಂಥ ಅಂಕಪ್ರೇರಿತ ಚಿತ್ರಗಳನ್ನೇ ಹಾಕಿರುತ್ತಾರೆ. ಪಾಲಕರೂ ಅದಕ್ಕೇ ಆಕರ್ಷಿತರಾಗುತ್ತಾರೆ. ನಾವು ಮಕ್ಕಳಿಗೆ ಬದುಕಿನಲ್ಲಿ ಎದುರಿಸಬಹುದಾದ ಅವಮಾನ, ಅನುಮಾನ, ಅವಹೇಳನ ಇಂಥವುಗಳನ್ನು ಎದುರಿಸಲು, ಸ್ವೀಕರಿಸಲು ಕಲಿಸುವುದು ಯಾವಾಗ?

ಮೌಲ್ಯಾಧಾರಿತ ಶಿಕ್ಷಣವೆಂಬುದು ಇದ್ದಿದ್ದರೆ ಇಂಥ ಪ್ರಮಾದಗಳ ಪ್ರಮಾಣ ಕಡಿಮೆಯಾಗಬಹುದು. ಆದರೆ ನಮ್ಮ ಶಿಕ್ಷಣ ಮೌಲ್ಯಗಳಿಗಿಂತಲೂ ಹೆಚ್ಚಾಗಿ ಮೌಲ್ಯಾಂಕದ ಬಗ್ಗೆಯೇ ತಲೆಕೆಡಿಸಿಕೊಳ್ಳುತ್ತಿದೆ.

ತನ್ನವರೆಂದು ಹೇಳಿಕೊಳ್ಳಲಾಗದ ಪರಿಸರದಲ್ಲಿ ನಿರಂತರವಾಗಿ ಮಕ್ಕಳಿಂದ ಹೀಗಳೆಯುವಿಕೆಗೆ ಮತ್ತು ಛೇಡಿಸುವಿಕೆಗೆ ಒಳಗಾದ ಮಗುವಿನ ಅಸಹಾಯಕತನ ಆಕ್ರೋಶವಾಗಿ ಬದಲಾಗಿದ್ದು ಸಮರ್ಥನೀಯವಲ್ಲ. ಆದರೆ ಇಲ್ಲಿ ಆ ಮಗುವನ್ನು ದೂರುವ ದೂಷಿಸುವ ವ್ಯವಸ್ಥೆಯೂ ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ.

ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಸಿಗಬಹುದು ಎಂಬ ನಿರೀಕ್ಷೆಯಿಂದ ಪಾಲಕರು ಶುಲ್ಕ ಭರಿಸುತ್ತಾರೆ. ಫೋನಿನ ಗೀಳು ಕಡಿಮೆಯಾಗಲಿ ಎಂದು ಮನೆಯಿಂದಾಚೆ ಕರುಳಿನ ಕುಡಿಗಳನ್ನು ಬಿಟ್ಟಿರುತ್ತಾರೆ. ಅಲ್ಲೊಂದು ನಂಬಿಕೆ ಇರುತ್ತದೆ. ಶಾಲೆಗಳೆಂಬ ಸಂಸ್ಥೆಗಳಲ್ಲಿ ಮಕ್ಕಳು ಸುರಕ್ಷಿತವಾಗಿರುತ್ತಾರೆ ಎಂಬ ಭರವಸೆ ಇರುತ್ತದೆ.

ಆದರೆ ಬಳ್ಳಾರಿಯ ಈ ಪ್ರಕರಣದಲ್ಲಿ ಕೇವಲ 9 ಮಕ್ಕಳಿಗೆಂದೇ ವಸತಿ ವ್ಯವಸ್ಥೆ ಇರುವ ಶಾಲೆಗೆ ಈ ಬಗ್ಗೆ ಅನುಮತಿ ಪಡೆದಿತ್ತೆ? ಎಂಬ ಪ್ರಶ್ನೆಯೊಂದಿಗೆ, ಮಕ್ಕಳ ನಡುವೆ ನಡೆದಿದ್ದೆಲ್ಲವೂ ಅಲ್ಲಿರುವವರಿಗೆ ತಿಳಿಯಲೇ ಇಲ್ಲವೇ? ಆಕ್ರೋಶಿತ ಮಗುವಿಗೆ ಅಷ್ಟು ಬೇಗ ಮಾರಕಾಸ್ತ್ರಗಳು ಸಿಗುವಂತೆ ಆಗಿದ್ದು, ಹಲ್ಲೆ ಮಾಡುವಾಗಲೂ ಯಾವ ಮೇಲ್ವಿಚಾರಕರೂ ಇಲ್ಲದೇ ಇರುವುದು ಇವೆಲ್ಲವೂ ನಮ್ಮಲ್ಲಿ ನೂರು ಪ್ರಶ್ನೆಗಳನ್ನು ಮೂಡಿಸುತ್ತದೆ. ಆದರೆ ಈ ಪ್ರಶ್ನೆಗಳೆಲ್ಲ ಈ ಪ್ರಕರಣಕ್ಕೆ ಮಾತ್ರ ಸಂಬಂಧಿಸಿದವು. ಇದಕ್ಕೂ ಹೆಚ್ಚಿನ ಪ್ರಶ್ನೆಗಳು ನಮ್ಮಲ್ಲಿ ಮೂಡಬೇಕಿರುವುದು ಕ್ಷುಲ್ಲಕ ಎನಿಸಬಹುದಾದ ಕಾರಣದಿಂದ ಒಬ್ಬ ಕನಸು ಕಂಗಳ ಹುಡುಗ ಕಾನೂನಿನೊಂದಿಗೆ ಸಂಘರ್ಷಕ್ಕೆ ಇಳಿದ ಬಾಲಕನಾಗಿ ಬದಲಾದ? ಬರಿಯ ಮಜಾ ಮಾಡಲು ಎಂಬ ಹಗುರ ಮನಸಿನಿಂದ ಛೇಡಿಸಿದ ಕಾರಣಕ್ಕೇ ಮಗುವೊಂದು ಸಾವಿಗೀಡಾಯಿತು. ಬುದ್ಧಿವಾದ ಸಹಿಸದ ಯುವಕ ಸಾವಿನ ಮನೆಗೆ ತಾನೇ ಎದ್ದು ಹೊರಟ. ಇವೆರಡೂ ಸಾವುಗಳು ಎಚ್ಚರಿಕೆಯ ಗಂಟೆಯಾಗಬೇಕಾಗಿದೆ. ನಮ್ಮ ನಡುವಿನ ಮಕ್ಕಳ ಮನೋವ್ಯಾಪಾರ ಹೇಗಿದೆ ಮತ್ತು ಎತ್ತ ಸಾಗಿದೆ ಎಂಬಷ್ಟು ವ್ಯವಧಾನ ಮತ್ತು ಸಮಯವನ್ನು ಎಲ್ಲರೂ ಹೊಂಚಿಕೊಳ್ಳಬೇಕಿದೆ. ಗೀಳುಗಳನ್ನು ದೂರದೇ, ಮಕ್ಕಳಿಗಾಗಿ ಸುರಕ್ಷಿತ ಪರಿಸರ ನಿರ್ಮಿಸಬೇಕಾಗಿದೆ.

■ ರಶ್ಮಿ ಎಸ್



ವಿಜಯ